ಅ) ಪ್ರಸಕ್ತ ಸಾಲಿನಲ್ಲಿ ಒಮ್ಮೆ ಮಂಜೂರಾದ ಪೊತ್ತವನ್ನು ಕಡಿಮೆಗೊಳಿಸಲಾಗಿದೆಯೇ ಮತ್ತು ಆ ರೀತಿ ೧೯೮೫-೮೬ನೇ ವರ್ಷದಲ್ಲಿ ಕಡಿಮೆ ಮಾಡಿದ ಪೊತ್ತವನ್ನು ಎಲ್ಲಿ ಖರ್ಚು ಮಾಡಲಾಯಿತು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

ಅ)

ವರ್ಷ	ಖರ್ಚಾದ ಹಣ (ಲಕ್ಷ ರೂ.ಗಳಲ್ಲಿ)
೧೯೮೫-೮೬	೧೨೭.೪೭
೧೯೮೪-೮೫	೧೨೪.೩೦೦
೧೯೮೩-೮೪	೬೩.೯೧೮

(೧೯೮೫ನೇ ಡಿಸೆಂಬರ್ ೩೧ರ ವರೆಗೆ)

ಆ) ಇಲ್ಲಾ.

ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ಮರಗಳು ನಾಶವಾಗಿರುವ ಬಗ್ಗೆ

೧೫೮೨. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ತೆಂಗಿನ ಮರಗಳಿಗೆ ರಸ ಸೋರುವುದರಿಂದಲೂ, ಹುಳ ಸುಳಿಯನ್ನು ತಿನ್ನುವುದರಿಂದ ಸಾವಿರಾರು ಮರಗಳು ನಾಶವಾಗುವುದರಲ್ಲಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಕೂಡಲೇ ಸರಕಾರದವರೇ ಈ ಬಗ್ಗೆ ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು ಬಂದಿದೆ.

ಆ) (೧) ತೆಂಗಿನ ಮರಗಳಲ್ಲಿ ರಸ ಸೋರುವಿಕೆಯ ಬಗ್ಗೆ ತಾಲ್ಲೂಕು ಮಟ್ಟದಲ್ಲಿರುವ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಕ್ಷೇತ್ರಗಳಿಗೆ ಭೇಟಿ ನೀಡಿ ಸೂಕ್ತ ನಿಯಂತ್ರಣಾ ಕ್ರಮಗಳನ್ನು ಸೂಚಿಸಿರುತ್ತಾರೆ. ಈ ರೋಗ ತಗುಲಿ ರಸ ಸೋರುವ ಭಾಗಕ್ಕೆ ತೇಕಡ ಒಂದರಷ್ಟು ಬೋರ್ಡೊ ಹಚ್ಚುವುದರಿಂದ ಹತೋಟಿಗೆ ತರಬಹುದು.

(೨) ತೆಂಗಿನ ಕಪ್ಪು ತಲೆ ಹುಳದ ಹಾವಳಿಯು ತಿಪಟೂರು ತಾಲ್ಲೂಕಿನಲ್ಲಿ ವ್ಯಾಪಕವಾಗಿ ಕಂಡು ಬಂದಿದ್ದರಿಂದ ಸಮೀಕ್ಷೆ ನಡೆಸಲಾಗಿ, ಈ ತಾಲ್ಲೂಕಿನಲ್ಲಿ ೧.೨೮,೦೪೬ ಮರಗಳಿಗೆ ಹಲವು ಹಂತಗಳಲ್ಲಿ ಈ ರೋಗವು ಕಂಡು ಬಂದಿದ್ದು ಇದನ್ನು ಹತೋಟಿಗೆ ತರಲು ಎಂಟು ಸಸ್ಯ ಸಂರಕ್ಷಣಾ ದಳಗಳು ತಿಪಟೂರು ಕಲ್ಪೇಗೌಡನಹಳ್ಳಿ, ದೊಡ್ಡ ಮಾದನಹಳ್ಳಿ, ಕಿಬ್ಬನಹಳ್ಳಿ, ಹರಳುಗುಪ್ಪೆ, ಕಲ್ಕೆರೆ, ಹೊನ್ನಹಳ್ಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಸಂಬಂಧದಲ್ಲಿ ತಿಪಟೂರಿನ ಪ್ರಯೋಗ ಶಾಲೆಯನ್ನು ಬಲ ಪಡಿಸಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಪರೋಪಜೀವಿಗಳನ್ನು ಉತ್ಪನ್ನ ಮಾಡಲಾಗುತ್ತಿದೆ ರೈತರ ತಿಳುವಳಿಕೆಗಾಗಿ, ಆಕಾಶವಾಣಿ ಕರಪತ್ರಗಳು ಹಾಗೂ ಸಭೆಗಳ ಮೂಲಕ ವಿಪರವಾದ ಮಾರ್ಗದರ್ಶನ ನೀಡಲಾಗುತ್ತಿದೆ, ದಿನಾಂಕ ೪ನೇ ಫೆಬ್ರುವರಿ ೧೯೮೫ ರಂದು ತಿಪಟೂರಿನಲ್ಲಿ ಒಂದು ಸೆಮಿನಾರ್ ಏರ್ಪಡಿಸಿ ಕೃಷಿ ವಿಶ್ವವಿದ್ಯಾನಿಲಯದ ತಜ್ಞರಿಂದ ಹಾಗೂ ಇಲಾಖೆ ಅಧಿಕಾರಿಗಳಿಂದ ರೈತರಿಗೆ ತಿಳುವಳಿಕೆ ನೀಡಲಾಗಿದೆಯಲ್ಲದೆ, ಮುಂಬರುವ ತಿಂಗಳುಗಳಲ್ಲಿ ಕೀಟಬಾಧೆ ತೀವ್ರಗೊಳ್ಳುವ ಸಂಭವವಿದ್ದು ಇದರ ನಿಯಂತ್ರಣದ ಬಗ್ಗೆ ಎರಡು ಮಾಹೆಯವರೆಗೆ ಆಂದೋಳನವನ್ನು ತಿಪಟೂರು ತಾಲೂಕಿನಲ್ಲಿ ನಡೆಸಲಾಗುತ್ತಿದೆ.